# ಜಿಲ್ಲಾ ಪಂಚಾಯತ ರಾಯಚೂರು.

ಸಂ:ಜಿಪಂರಾ:ಗ್ರಾನೀಸ:DDP:ಆಂಮ:ವಿವ :2007-08 ದಿನಾಂಕ: 18-01-2008

## ಆದೇಶ.

**ವಿಷಯ** : 2006-07 ನೇ ಸಾಲಿನ DDP ಗ್ರಾಮೀಣ ಕುಡಿಯುವ ನೀರಿನ ಕಾಮಗಾರಿಗಳ ಅಂದಾಜು ಪತ್ರಿಕೆಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ.

**ಉಲ್ಲೇಖ**: ಕಾರ್ಯ ಪಾಲಕ ಅಭಿಯಂತರು, ಜಿಲ್ಲಾ ಪಂಚಾಯತ ಇಂಜಿನೀಯರಿಂಗ ವಿಭಾಗ ರಾಯಚೂರು ಅವರ ಪತ್ರ ಸಂ:ಕಾನಿಅ/ಪಂರಾಇಂ/ರಾವಿ/ಕಿ.ಇಂ.-2/2007-08/ ದಿನಾಂಕ:4-1-2008.

ಉಲ್ಲೇಖಿತ ಪತ್ರದ ಮೂಲಕ ಕಾರ್ಯಪಾಲಕ ಅಭಿಯಂತರು, ಜಿಲ್ಲಾ ಪಂಚಾಯತ ರಾಜ್ ಇಂಜಿನೀಯರಿಂಗ ವಿಭಾಗ ರಾಯಚೂರು ಅವರು 2005-06 ನೇ ಸಾಲಿನ DDP ಕ್ರಿಯಾ ಯೋಜನೆಯಲ್ಲಿ ಮಂಜೂರಾಗಿರುವ ಗೋಪಾಲಪುರ ಗ್ರಾಮದ ಕೋಳವೆ ನೀರು ಸರಬರಾಜು ಪುನಃಶ್ಚೇತನ ಯೋಜನೆ ಕಾಮಗಾರಿಯ ಅಂದಾಜು ಪತ್ರಿಕೆಗಳನ್ನು ಆಡಳಿತಾತ್ಮಕ ಮಂಜೂರಾತಿ ಕೋರಿ ಸಲ್ಲಿಸಿರುತ್ತಾರೆ.

ಕಾರ್ಯಪಾಲಕ ಅಭಿಯಂತರು, ಜಿಲ್ಲಾ ಪಂಚಾಯತ ಇಂಜಿನೀಯರಿಂಗ ವಿಭಾಗ ರಾಯಚೂರು ಅವರು ಸಲ್ಲಿಸಿದ ಅಂದಾಜು ಪತ್ರಕೆಗಳನ್ನು ಪರಿಶೀಲಿಸಲಾಗಿ ಈ ಕಾಮಗಾರಿಗಾಗಿ ಈ ಕಛೇರಿ ಆದೇಶ ಸಂ:ಆಮಂ/02/2007-08 ದಿನಾಂಕ: 17-04-2007 ರಲ್ಲಿ ರೂ. 8.50 ಲಕ್ಷಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ. ಪ್ರಸ್ತುತ ಕಾರ್ಯಪಾಲಕ ಅಭಿಯಂತರು, ಪಂಚಾಯತ ರಾಜ್ ಇಂಜಿನೀಯರಿಂಗ ವಿಭಾಗ ರಾಯಚೂರು ಅವರು ಸದರಿ ಕಾಮಗಾರಿಗಳನ್ನು ಇದುವರೆಗೆ ಪ್ರಾರಂಭಿಸಿಲ್ಲ ಎಂದು ದೃಢೀಕರಿಸಿರುವುದರಿಂದ ಹಿಂದಿನ ಆಡಳಿತಾತ್ಮಕ ಮಂಜೂರಾತಿಯನ್ನು ರದ್ದು ಪಡಿಸಿ, ಕೆಳಕಾಣಿಸಿದ ಷರತ್ತಿಗೊಳಪಟ್ಟು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

| **ತಾಲೂಕ :ದೇವದುರ್ಗ DDP ಯೋಜನೆ** | | |
|---|---|---|
| ಕ್ರ. ಸಂ | ಕಾಮಗಾರಿ ಹೆಸರು | ಅಂದಾಜು ಮೊತ್ತ (ರೂ.ಲಕ್ಷದಲ್ಲಿ) |
| 1 | ಗೋಪಲಪುರ ಗ್ರಾಮದಲ್ಲಿ ಕೋ.ನೀ.ಯೋಜನೆ.<br>( ಪೈ.ಲೈನ, ಜಾಕ್ ವೆಲ್ ಹಾಗೂ ಇನ್ ಟೇಕವೆಲ್ ಒದಗಿಸುವುದು) | 4.50 |
| 2 | ಗೋಪಲಪುರ ಗ್ರಾಮದಲ್ಲಿ ಕೋ.ನೀ.ಯೋಜನೆ.<br>( ಪೈ.ಲೈನ, ಪಂ.ಹೌಸ, ಪಂಪಿಂಗ ಮಷಿನರಿ ಹಾಗೂ 3-ಸಿಸ್ಟರ್ನ್ ಒದಗಿಸುವುದು) | 3.00 |

### ಷರತ್ತುಗಳು:

1. ಈ ಯೋಜನೆಯಲ್ಲಿ ತೆಗೆದುಕೊಂಡಿರುವ ಕಾಮಗಾರಿಗಳನ್ನು ಬೇರೆ ಯಾವುದೇ ಯೋಜನೆಯಲ್ಲಿ ತೆಗೆದುಕೊಂಡಿಲ್ಲವೆಂದು ದೃಢೀಕರಿಸುವುದು.
2. ಈ ಎಲ್ಲಾ ಕಾಮಗಾರಿಗಳನ್ನು 2007-08 ನೇ ಆರ್ಥಿಕ ವರ್ಷದಲ್ಲಿ ಪೂರ್ಣಗೊಳಿಸಬೇಕು. ಯಾವುದೇ ಕಾರಣಕ್ಕೂ ಈ ಕಾಮಗಾರಿಗಳು ಮುಂದಿನ ವರ್ಷಕ್ಕೆ ಮುಂದುವರೆದ ಕಾಮಗಾರಿಗಳಾಗದಂತೆ ನೋಡಿಕೊಳ್ಳತಕ್ಕದ್ದು.
3. ಜಿಲ್ಲಾ ಪಂಚಾಯತ ಕಛೇರಿಯಲ್ಲಿ ಕಾಮಗಾರಿಗಳ ಗಣಕೀಕೃತ ಮಾಹಿತಿಯನ್ನು update ಮಾಡಲು ಕಾಮಗಾರಿಯನ್ನು ಪ್ರಾರಂಭಿಸಿದ ದಿನಾಂಕ ಹಾಗೂ ಪೂರ್ಣಗೊಳಿಸಿದ ದಿನಾಂಕ ಅಥವಾ ಪೂರ್ಣಗೊಳಿಸಬಹುದಾದ ದಿನಾಂಕ ಮತ್ತು ಇತರೆ ಮಾಹಿತಿಯನ್ನು ಈ ಕಾರ್ಯಾಲಯದಿಂದ ನೀಡಿದ

ನಮೂನೆಯಲ್ಲಿ ಒದಗಿಸಲು ಸೂಚಿಸಿದೆ. ಹಾಗೂ ಹಿಂದಿನ ಮಾಹೆಯಲ್ಲಿನ ವೆಚ್ಚದ ವಿವಿರಗಳನ್ನು ಪ್ರತಿ ತಿಂಗಳು 5 ನೇ ದಿನಾಂಕದೊಳಗೆ ಈ ಕಛೇರಿಗೆ ಸಲ್ಲಿಸುವುದು.

4. ಕಾಮಗಾರಿಯ ಅನುಷ್ಠಾನ ಮತ್ತು ಆರ್ಥಿಕ ಮತ್ತು ಭೌತಿಕ ಪ್ರಗತಿಯ ಮಾಹಿತಿಯನ್ನು ಸಂಬಂದಿಸಿದ ಗ್ರಾಮ ಪಂಚಾಯಿತಿಗೆ ಒದಗಿಸುವುದು.
5. ವೆಚ್ಚವನ್ನು ಸಂಬಂದಿಸಿದ ಯೋಜನೆಯ ಲೆಕ್ಕ ಶೀರ್ಷಿಕೆಯಡಿ ಭರಿಸುವುದು.

(ಎಸ್.ಅನೀಸ್ ಸಿರಾಜ್)
ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ ರಾಯಚೂರು.

**ಪ್ರತಿಯನ್ನು ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ ಇವರಿಗೆ ಕಳುಹಿಸಿದೆ.**

1. ಮಾನ್ಯ ಅದ್ಯಕ್ಷರು/ಉಪಾದ್ಯಕ್ಷರು ಜಿಲ್ಲಾ ಪಂಚಾಯತ ರಾಯಚೂರು ರವರ ಆಪ್ತ ಶಾಖೆಗೆ.
2. ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ ರಾಯಚೂರು ರವರ ಆಪ್ತ ಶಾಖೆಗೆ.
3. ಕಾರ್ಯ ಪಾಲಕ ಅಭಿಯಂತರು, ಜಿಲ್ಲಾ ಪಂಚಾಯತ ಇಂಜಿನೀಯರಿಂಗ ವಿಭಾಗ ರಾಯಚೂರು ಇವರಿಗೆ ಆಡಳಿತ ಮಂಜೂರಾತಿ ನೀಡಿದ ಅಂದಾಜು ಪಟ್ಟಿಗಳನ್ನು ಲಗತ್ತಿಸಿ ಕಳುಹಿಸಿದೆ.
4. ಸಹಾಯಕ ಕಾರ್ಯಪಾಲಕ ಅಭಿಯಂತರು ಜಿಲ್ಲಾ ಪಂಚಾಯತ ಇಂಜಿನೀಯರಿಂಗ ಉಪವಿಭಾಗ ಸಿಂಧನೂರು
5. ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಪಂಚಾಯತ ಸಿಂಧನೂರು.
6. ಅದ್ಯಕ್ಷರು / ಕಾರ್ಯದರ್ಶಿಗಳು ______________ಗ್ರಾಮ ಪಂಚಾಯತ, _______ ತಾಲ್ಲೂಕು ಇವರಿಗೆ ರವಾನಿಸುತ್ತಾ ಕಾಮಗಾರಿಯ ಆಡಳಿತಾತ್ಮಕ ಮಂಜೂರಾತಿಯ ಬಗ್ಗೆ ಗ್ರಾಮ ಪಂಚಾಯತ ಮಾಸಿಕ ಸಭೆಯಲ್ಲಿ ಓದಿ ದೃಢೀಕರಿಸುವುದು.
7. ಜಿಲ್ಲಾ ಪಂಚಾಯತ ರಾಯಚೂರು ಸೂಚನಾ ಫಲಕಕ್ಕೆ.
8. ಕಛೇರಿ ಪ್ರತಿ.